**ಅಸಲು ದಾವಾ ನಂ :423/2020**

**ಪಿಡಬ್ಲೂ.1**

ದಿನಾಂಕ : 10/08/2021

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಶ್ರೀ ಎಸ್ ಎಸ್ ಎಸ್ ವಾದಿ ಪರ ವಕೀಲರಿಂದ**

ನಾನು ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿರುವ ಎಲ್ಲ ಸಂಗತಿಗಳನ್ನು ಓದಿಸಿ ತಿಳಿದುಕೊಂಡಿದ್ದು ಅವು ಸತ್ಯವಾಗಿರುತ್ತವೆ. ಅದಕ್ಕೆ ನಾನು ನನ್ನ ಸಹಿ ಮಾಡಿರುತ್ತೇನೆ.

ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರ್ಪಡಿಸಿರುತ್ತೇನೆ.

ನಾನು ಖವಟಕೊಪ್ಪ ಗ್ರಾಮದ ವ್ಹಿ ಪಿ ಸಿ ನಂ.70 ಎ ರ 20 ನೇ ಸಾಲಿನ ಕರಾಕರಣೆಯ ಯಾದಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.1 ಎಂದು, ಅದೇ ಗ್ರಾಮದ ವ್ಹಿ ಪಿ ಸಿ ನಂ.70/ಬಿರ 20 ನೇ ಸಾಲಿನ ಕರಾಕರಣೆಯ ಯಾದಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.2 ಎಂದು, ಅದೇ ಗ್ರಾಮದ ವ್ಹಿ ಪಿ ಸಿ ನಂ.70/ಸಿ ರ 20 ನೇ ಸಾಲಿನ ಕರಾಕರಣೆಯ ಯಾದಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.3 ಎಂದು, ಅದೇ ಗ್ರಾಮದ ವ್ಹಿ ಪಿ ಸಿ ನಂ.75 ಎ ರ 20 ನೇ ಸಾಲಿನ ಕರಾಕರಣೆಯ ಯಾದಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.4 ಎಂದು, ಅದೇ ಗ್ರಾಮದ ವ್ಹಿ ಪಿ ಸಿ ನಂ.79/ಸಿ ರ 20 ನೇ ಸಾಲಿನ ಕರಾಕರಣೆಯ ಯಾದಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.5 ಎಂದು, ಅದೇ ಗ್ರಾಮದ ವ್ಹಿ ಪಿ ಸಿ ನಂ.79/ಬಿ ರ 20 ನೇ ಸಾಲಿನ ಕರಾಕರಣೆಯ ಯಾದಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.6 ಎಂದು, ಸಂಕರಟ್ಟಿ ಗ್ರಾಮ ಪಂಚಾಯಿತಿಗೆ ನೀಡಿರುವ ತಕರಾರು ಅರ್ಜಿಯನ್ನು ನಿ.ಪಿ.7 ಎಂದು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕಾಪಂಚಾಯಿತವರಿಗೆ ನೀಡಿರುವ ದೂರಿನ ಪ್ರತಿ ನಿ.ಪಿ.8 ಎಂದು, ಗ್ರಾಮ ಪಂಚಾಯಿತಿ ಸಂಕರಟ್ಟಿ ದಿಃ14.02.2020 ರಂದು ನೀಡಿರುವ ತಿಳುವಳಿಕೆ ನೋಟಿಸನ್ನು ನಿ.ಪಿ.9 ಎಂದು, ದಾವಾಸ್ತಿಗಳಿಗೆ ಸಂಬಂಧಪಟ್ಟಂತೆ 6 ಛಾಯಾ ಚಿತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಪಿ.10 ರಿಂದ ನಿ.ಪಿ.15 ಎಂದು ಗುರುತಿಸಲಾಯಿತು. ಸದರಿ ಛಾಯಾ ಚಿತ್ರಗಳನ್ನು ತೆಗೆದ ಬಗ್ಗೆ ಒಂದು ಸಿಡಿ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.16 ಎಂದು, ಖವಟಕೊಪ್ಪ ಗ್ರಾಮದ ವ್ಹಿ ಪಿ ಸಿ ನಂ.235/ಎ ರ ಕರಾಕರಣೆಯಾದಿಯ ದೃಢೀಕೃತ ನಕಲನ್ನು ನಿ.ಪಿ.17 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯವಿಚಾರಣೆ : ಕಾಲಾವಕಾಶ ನೀಡಲಾಯಿತು.

ಓ.ಹೇ.ಕೇ. ಸರಿ ಇದೆ,

4 ನೇ ಹೆಚ್ಚುವರಿ ನ್ಯಾಯಾಧೀಶರು ಹಾಗೂ

**ಜೆ.ಎಂ.ಎಫ್.ಸಿ. ನ್ಯಾಯಾಲಯ ಅಥಣಿ.**